"ಪ್ಲಾಸ್ಟಿಕ್ ಬಳಸಬೇಡಿ"

# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಲ್ಲಾಪುರ


**ಶಿರಸಿ ರಸ್ತೆ, ಮಾರ್ಕೇಟ್ ಯಾರ್ಡ ಯಲ್ಲಾಪುರ (ಉ.ಕ) - 581 359**

ಇ-ಮೇಲ್ : apmcylpr@gmail.com     ದೂರವಾಣಿ : 08419-261165


**ಕ್ರ.ಸಂ : ಕೃ.ಉ.ಮಾ.ಸ/ ಯ / 344 /2021-22**     **ದಿನಾಂಕ : 28-06-2021**

ಗೆ,

ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಯಲ್ಲಾಪುರ ವಿಭಾಗ, ಯಲ್ಲಾಪುರ.

ಮಾನ್ಯರೇ,

ವಿಷಯ :- ಯಲ್ಲಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗಾಗಿ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಿರುವ 2.00 ಹೆಕ್ಟೇರ್ ಅರಣ್ಯ ಜಮೀನು ಆನಲೈನ್ ಪ್ರಸ್ತಾವನೆ ಕುರಿತು.

ಉಲ್ಲೇಖ :- ತಮ್ಮ ಪತ್ರ ಸಂಖ್ಯೆ : ಎ6/ ಭೂಮಿ/ಎಫ್‌ಸಿ/ಸಿ ಆರ್-11/2019-20/291/ ದಿನಾಂಕ : 07-06-2021

*-*-*-*-*-*-*-*-*-*-*

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಯಲ್ಲಾಪುರ ಎ.ಪಿ.ಎಂ.ಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗಾಗಿ ಅರಣ್ಯ ಜಮೀನು ಪಡೆಯುವ ಬಗ್ಗೆ ಸಲ್ಲಿಸಿರುವ ಆನಲೈನ್ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮೇಲಿನ ಉಲ್ಲೇಖದಲ್ಲಿ ತಾವು ಸದರ ಸ್ಥಳವನ್ನು ದಿನಾಂಕ : 19-10-2020 ರಂದು ಪರಿಶೀಲಿಸಿ, ದಟ್ಟವಾದ ಅರಣ್ಯ ಪ್ರದೇಶ ಹಾಗೂ ಬಹಳಷ್ಟು ಸ್ವಾಭಾವಿಕವಾಗಿ ಬೆಳೆದಿರುವ ಮರಗಳಿರುವುದರಿಂದ ಸದರ ಜಾಗವನ್ನು ಬಿಟ್ಟು ಕಡಿಮೆ ಮರಗಳಿರುವ ಬೇರೆ ಭೂಮಿಯನ್ನು ಅನ್ವೇಷಣೆ ಮಾಡಿ ಹೊಸದಾಗಿ ಅಂತರಜಾಲದಲ್ಲಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಕೊಳ್ಳುವ ಬಗ್ಗೆ ಸೂಚಿಸಿಲಾಗಿರುತ್ತದೆ.

ಈ ಸಮಿತಿಯಿಂದ ಈಗಾಗಲೇ ಅರಣ್ಯ ಇಲಾಖೆಯಿಂದ 15 ಎಕರೆ ಜಮೀನು ಪಡೆದು ಯಲ್ಲಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ರಚನೆ ಮಾಡಲಾಗಿದ್ದು, ಸದರಿ ಪ್ರಾಂಗಣಕ್ಕೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ, ಉತ್ತಮವಾದ ಮಾರುಕಟ್ಟೆ ಸ್ಥಾಪಿಸಿದ್ದು, ಇದರಿಂದ ಈ ಭಾಗದ ರೈತರಿಗೆ, ಸಾರ್ವಜನಿಕರಿಗೆ, ವ್ಯಾಪಾರಸ್ಥರಿಗೆ, ಹಮಾಲರಿಗೆ, ವಾಹನದಾರರಿಗೆ ಹಾಗೂ ಇತರ ಪೇಟೆ ಕಾರ್ಯಕರ್ತರಿಗೆ ಅನುಕೂಲವಾಗಿದೆ. ಯಲ್ಲಾಪುರ, ಅಂಕೋಲಾ, ಜೋಯಿಡಾ ಹಾಗೂ ಮುಂಡಗೋಡ ತಾಲೂಕಿನಲ್ಲಿ ಅಡಿಕೆ ಕೃಷಿ ಉತ್ಪನ್ನವನ್ನು ರೈತರು ಹೆಚ್ಚಿಗೆಯಾಗಿ ಬೆಳೆಯುತ್ತಿರುವುದರಿಂದ ಹಾಗೂ ಸುಸಜ್ಜಿತವಾದ ಅಡಿಕೆ ಮಾರುಕಟ್ಟೆ ಬೇರೆ ತಾಲೂಕಿನಲ್ಲಿ ಇಲ್ಲದೇ ಇರುವುದರಿಂದ ಯಲ್ಲಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಅಡಿಕೆ ಕೃಷಿ ಉತ್ಪನ್ನದ ವಹಿವಾಟು ಪ್ರಮಾಣ ಈ ಹಿಂದಿನಕ್ಕಿಂತ ಹೆಚ್ಚುತ್ತಿರುವ ಮೇರೆಗೆ ಸದರಿ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಿ ಇಡಲು ಉಗ್ರಾಣ ಮತ್ತು ಗೋದಾಮುಗಳನ್ನು ನಿರ್ಮಿಸಿ ರೈತರಿಗೆ ಅನೂಕೂಲ ಮಾಡಿ ಕೊಡುವುದು ಹಾಗೂ ಲೈಸನ್ಸ್ ಹೊಂದಿ ವ್ಯವಹರಿಸುತ್ತಿರುವ ಸುಮಾರು 170 ಕ್ಕೂ ಹೆಚ್ಚಿನ ವರ್ತಕರಿಗೆ ಅಂಗಡಿ/ಗೋದಾಮು ನಿರ್ಮಿಸುವುದು ಅವಶ್ಯವಾಗಿರುತ್ತದೆ. ಈಗಿರುವ ಪ್ರಾಂಗಣದ ಲಗ್ತ ಇರುವ ಜಾಗದ ಹೊರತು ಬೇರೆ ಕಡಿಮೆ ಮರಗಳಿರುವ ಜಾಗವನ್ನು ಅನ್ವೇಷಣೆ ಮಾಡಿ ಪ್ರಸ್ತಾವನೆ ಸಲ್ಲಿಸಿ ಸದರಿ ಜಾಗದಲ್ಲಿ ಇನ್ನೊಂದು ಪ್ರಾಂಗಣವನ್ನು ನಿರ್ಮಿಸಿದಲ್ಲಿ ಸದರಿ ಪ್ರಾಂಗಣವು ಯಲ್ಲಾಪುರ ಪಟ್ಟಣದಿಂದ ದೂರವಾಗುವುದರಿಂದ ರೈತರು, ವ್ಯಾಪಾರಸ್ಥರು, ಪೇಟೆ ಕಾರ್ಯಕರ್ತರು ಹಾಗೂ ವಾಹನದಾರರುಗಳಿಗೆ ವ್ಯವಹರಿಸಲು ಅನುಕೂಲವಾಗುವುದಿಲ್ಲ ಮತ್ತು ಸಮಿತಿಗೆ ಎರಡು ಕಡೆ ಪ್ರಾಂಗಣವಾಗುವುದರಿಂದ ಸದರಿ ಪ್ರಾಂಗಣವನ್ನು ಸುಸಜ್ಜಿತವಾಗಿ ನಿರ್ಮಿಸಲು ಸಾಧ್ಯವಾಗುವುದಿಲ್ಲ.

ಮಾರುಕಟ್ಟೆ ಪ್ರಾಂಗಣಕ್ಕೆ ಲಗ್ತ ಇರುವ ಜಾಗ ಫಾರೆಸ್ಟ್ ಸ.ನಂ 68A1A1A1A1A1 ರಲ್ಲಿಯ 2.00 ಹೆಕ್ಟೇರ ಜಾಗವನ್ನು ಈ ಸಮಿತಿಗೆ ನೀಡಿದಲ್ಲಿ ಇದರಿಂದ ಎಲ್ಲಾ ಕೃಷಿ ಉತ್ಪನ್ನಗಳ ವಹಿವಾಟು ಮಾರುಕಟ್ಟೆ ಪ್ರಾಂಗಣದಲ್ಲಿಯೇ ಜರುಗುವುದರಿಂದ ರೈತರಿಗೆ, ಪೇಟೆ ಕಾರ್ಯಕರ್ತರಿಗೆ, ಹಮಾಲರಿಗೆ, ವಾಹನದಾರರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತದೆ. ಪ್ರಸ್ತಾಪಿತ ಸದರಿ ಜಮೀನು ಅರಣ್ಯ ಜಾಗವಾಗಿದ್ದು ಪ್ರಾಂಗಣ ವಿಸ್ತೀರಣಕ್ಕೆ ಸಮಂಜಸವಾಗಿರುತ್ತದೆ ಹಾಗೂ ಈಗಿರುವ ಜಾಗಕ್ಕೆ ಹೊಂದಿ ಬೇರೆ ಖಾಲಿ ಜಮೀನು ಲಭ್ಯವಿಲ್ಲದ ಕಾರಣ ಸದರಿ ಜಾಗವನ್ನು ಕೋರಿ ಸನ್ 1998 ರಿಂದಲೂ ಪ್ರಸ್ತಾಪಿಸಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸದರಿ ಜಾಗವು ಯಲ್ಲಾಪುರ ಪಟ್ಟಣದ ಮಧ್ಯ ಭಾಗದಲ್ಲಿರುವುದರಿಂದ ಈ ಸಮಿತಿಗೆ ಸದರಿ ಜಾಗ ಮಂಜೂರಾದಲ್ಲಿ ಆದಷ್ಟು ಮರಗಳನ್ನು ಕಡಿತಗೊಳಿಸದೇ ಜಾಗವನ್ನು ಉಳಿಸುವ ಪ್ರಯತ್ನದೊಂದಿಗೆ ಮಾರುಕಟ್ಟೆ ಪ್ರಾಂಗಣ ರಚನೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ ಹಾಗೂ ಸಮಿತಿಗೆ ಸದರಿ ಜಾಗ ಮಂಜೂರು ಮಾಡಿದಲ್ಲಿ ಸದರ ಜಮೀನಿನಲ್ಲಿ ರೈತರಿಗೆ/ಸಾರ್ವಜನಿಕರಿಗೆ ಉಪಯುಕ್ತ ಮಾರುಕಟ್ಟೆ ನಿರ್ಮಾಣಕ್ಕೆ ಅನುಕೂಲವಾಗುವುದರಿಂದ ಈ ಭಾಗದ ರೈತರ/ ಯಲ್ಲಾಪುರ ಪಟ್ಟಣದ ಬೆಳವಣಿಗೆ ಹಿತದೃಷ್ಟಿಯಿಂದ ಪೂರಕವಾಗುತ್ತದೆ.

ಕಾರಣ ಈ ಮೇಲಿನ ಅಂಶಗಳನ್ನು ಪರಿಗಣಿಸಿ ಯಲ್ಲಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯು ಸರ್ಕಾರದ ಅಂಗ ಸಂಸ್ಥೆಯಾಗಿರುವುದರಿಂದ ಎ.ಪಿ.ಎಂ.ಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗೆ ಪ್ರಸ್ತಾಪಿತ ಅರಣ್ಯ ಜಮೀನು ಈಗಿರುವ ಜಾಗದ ಲಗ್ತ ಇರುವುದರಿಂದ ಹಾಗೂ ಸುತ್ತಮುತ್ತ ಬೇರೆ ಕಂದಾಯ ಮತ್ತು ಕಡಿಮೆ ಮರಗಳಿರುವ ಅರಣ್ಯ ಜಮೀನು ಲಭ್ಯವಿರದ ಪ್ರಯುಕ್ತ ಸದರಿ ಜಮೀನು ಮಂಜೂರಿ ಕೋರಿ ಈ ಸಮಿತಿಯಿಂದ ಸಲ್ಲಿಸಿರುವ ಪ್ರಸ್ತಾವನೆಯನ್ನು ತಮ್ಮ ಶಿಫಾರಸ್ಸಿನೊಂದಿಗೆ ಆನಲೈನ್ ಮುಖಾಂತರ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ

ಕಾರ್ಯದರ್ಶಿ

ಕೃಉ.ಮಾ.ಸ ಯಲ್ಲಾಪುರ (ಉ.ಕ)

Forest Land